## ಕಳೆದ ಸಂಚಿಕೆಯಲ್ಲಿ



ವಿದ್ಯಾರ್ಥಿಯಾಗಿ ಅಮೆರಿಕಗೆ ಬಂದಿದ್ದ ಜೋಶುಆನೊಂದಿಗೆ ಕಾಲ ಕಳೆಯುವ ಅವಕಾಶ ನ್ಯಾನ್ಸಿಗೆ ದೊರೆಯಿತು. ಕೂಸು ಮಡಿಲಲ್ಲಿರುವಾಗ, ಬೆಳೆದ ಮಗನೊಂದಿಗೆ ಕಾಲ ಕಳೆಯುವ ಅವಕಾಶ ದೊರೆತು ಅವಳ ಹಳೆಯ ನೆನಪುಗಳನ್ನು ಕೆದಕಿದವು. ತಾಯಿಯಾಗಿ ಮಗನಿಗೆ ಪೂರ್ಣ ಪ್ರೀತಿ ಕೊಡುವುದು ಸಾಧ್ಯವಾಗದ ಬಗ್ಗೆ ಅವಳಿಗೆ ಕೊರಗಿತ್ತು. ತನ್ನೊಂದಿಗೆ ಕೆಟ್ಟದಾಗಿ ನಡೆದುಕೊಂಡರೂ ಮಗನನ್ನು ಉತ್ತಮವಾಗಿ ಬೆಳೆಸಿರುವ ಅಬ್ರಹಾಮ್ ಬಗ್ಗೆ ಕೃತಜ್ಞತಾಭಾವವೂ ಮೂಡಿತು. ನ್ಯಾನ್ಸಿ ಮಗನೊಂದಿಗೆ ಸಮುದ್ರದಲ್ಲಿ ಈಜಲು ಹೋದಳು. ಮಗನ ಸ್ನೇಹಿತ ಸಾವಿನ ದವಡೆಗೆ ಸಿಲುಕಿದಾಗ ಅವನನ್ನು ರಕ್ಷಿಸಲು ಬೇರೆಯವರ ಮೊರೆ ಹೋಗಬೇಕಾದುದು ನ್ಯಾನ್ಸಿಗೆ ತನ್ನ ದೌರ್ಬಲ್ಯವನ್ನು ಅರಿವಾಗಿಸಿತು. ಮಗ ಅಮೆರಿಕದಲ್ಲಿರುವುದು ಅವಳಿಗೆ ಮಾನಸಿಕವಾಗಿ ನೆಮ್ಮದಿ ತಂದಿತು. ಆದರೆ, ಜೋಶುಆನನ್ನು ಮಾರ್ಕೋ ಮನಸಾರೆ ಒಪ್ಪಿಕೊಳ್ಳದೆ ಹೋದುದು ಅವಳ ಬೇಸರಕ್ಕೆ ಕಾರಣವಾಯಿತು.

ಮಾರ್ಕೋ ಘೋಷಿಸಿದ, ‘ನಾವು ಡೆನ್ಮಾರ್ಕ್‌ಗೆ ಮರಳಿ ಹೋಗುತ್ತಿದ್ದೇವೆ.’

‘ನಾವು ಡೆನ್ಮಾರ್ಕ್‌ಗೆ ಮರಳಿ ಹೋಗುತ್ತಿದ್ದೇವೆ!’ ನಾನು ಬಡಬಡಿಸಿದೆ, ‘ಹಾಗಿದ್ದರೆ, ನಾವಿಲ್ಲಿಗೆ ಬಂದದ್ದಾದರೂ ಏಕಾಗಿ?’

ಮಾರ್ಕೋಗೆ ಆರಂಭದಿಂದಲೂ ಅಮೆರಿಕ ಇಷ್ಟವಾಗಿರಲಿಲ್ಲ. ಅವನು ಸದಾ ಹೇಳುತ್ತಿದ್ದ: ‘ಯೂರೋಪಿಗೆ ಹೋಲಿಸಿದರೆ ಇಲ್ಲಿಯ ಜೀವನ ತುಂಬಾ ವ್ಯಸ್ತವಾಗಿದೆ. ಅಮೆರಿಕ ಫ್ರೆಂಡ್ಲಿಯಾಗಿದ್ದರೂ ಫೇಕ್ ಆಗಿದೆ. ಯೂರೋಪಿನ ಜನ ನಿಜವಾದ ಮನುಷ್ಯರು.’

ಒಳ್ಳೆಯ ಮತ್ತು ಕೆಟ್ಟ ಮನುಷ್ಯರು ಎಲ್ಲಾ ದೇಶಗಳಲ್ಲೂ ಇದ್ದಾರೆ. ಹಾಗೆ ಹೇಳಬೇಕೆಂದರೆ, ಜರ್ಮನ್ ಮತ್ತು ಫ್ರೆಂಚ್ ಜನರ ಛವಿ ವಿಶ್ವದಲ್ಲಿ ಉತ್ತಮವಾಗೇನೂ ಇಲ್ಲ. ಇಂಗ್ಲೆಂಡ್ ತನ್ನ ಕೊಲೋನಿಯಲ್ ರೂಲ್‌ನಿಂದಾಗಿ ಇಡೀ ವಿಶ್ವದಲ್ಲಿ ಅಪಕೀರ್ತಿಗೆ ಪಾತ್ರವಾಗಿದೆ ಎಂದು ನಾನು ಅವನೊಂದಿಗೆ ತರ್ಕಿಸುತ್ತಿದ್ದೆ.

ಪಾಲ್ ನಕ್ಕ. ಆದರೆ ಮಾರ್ಕೋ ನಕ್ಕಿರಲಿಲ್ಲ. ಅವನು ಹುಬ್ಬೇರಿಸಿದ್ದ.

ನಿಜ ಹೇಳಬೇಕೆಂದರೆ, ನಾನು ಅಮೆರಿಕದಿಂದ ಯೂರೋಪಿಗೆ ಮರಳಿ ಹೋಗಲು ಬಯಸುತ್ತಿರಲಿಲ್ಲ. ಅಮೆರಿಕದಲ್ಲಿಯೇ ನನ್ನ ಜೀವನವನ್ನು ಕಟ್ಟಿಕೊಳ್ಳಲು ಬಯಸುತ್ತಿದ್ದೆ. ನೀಲ್ ಮಡಿಲಿನಲ್ಲಿದ್ದರೆ, ಜೋಶ್ ಪಕ್ಕದಲ್ಲಿದ್ದ, ಇನ್ನು ನನಗೇನು ಬೇಕಿತ್ತು. ನಾನು ಮಾರ್ಕೋನೊಂದಿಗೆ ಜಗಳವಾಡಿದೆ, ಆದರೆ ಅವನು ಒಪ್ಪಲಿಲ್ಲ. ನಾನೇನು ಮಾಡುವುದು? ನನ್ನ ಸಾಮರ್ಥ್ಯದಲ್ಲಿ ನನ್ನ ಜೀವನದ ಬಂಡಿಯನ್ನು ಎಳೆಯಲು ಸಾಧ್ಯವಿರಲಿಲ್ಲ. ನನ್ನಿಚ್ಛೆ ಮತ್ತು ಅಭಿಪ್ರಾಯಕ್ಕೆ ಯಾವುದೇ ಮಹತ್ವವಿರಲಿಲ್ಲ. ಹೀಗಾಗಿ ಮೂರು ವರ್ಷಗಳ ಕಾಲ ಅಮೆರಿಕದಲ್ಲಿ ಕಳೆದು ನಾವು ಬುದ್ಧನ ನಾಡು ಡೆನ್ಮಾರ್ಕ್‌ಗೆ ಬಂದೆವು.

### ಡೆನ್ಮಾರ್ಕ್ (ಯೂರೋಪ್)

ಅಮೆರಿಕದಿಂದ ಡೆನ್ಮಾರ್ಕ್‌ಗೆ ಮರಳಿ ಬಂದಾಗ ತುಂಬಾ ಬೇಸರವಾಯಿತು. ನನ್ನ ಅಮೂಲ್ಯ ಆಭರಣದಂತಿದ್ದ ಜೋಶ್‌ನನ್ನು ಬಿಟ್ಟು ಬಂದಿರುವ ದುಃಖ ಕಾಡುತ್ತಿತ್ತು. ಆದರೆ ಮನಸ್ಸಿಗೆ, ಜೋಶ್ ಈಗ ಒಬ್ಬ ವಯಸ್ಕ ಪುರುಷನಾಗಿದ್ದು, ಅವನನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ನನಗೂ ಒಳಿತಿಲ್ಲ, ಅವನಿಗೂ ಒಳಿತಿಲ್ಲ; ಈಗ ಅವನ ಮತ್ತು ನನ್ನ ಮಾರ್ಗಗಳು ಬೇರೆಬೇರೆಯಾಗಿವೆ ಅನ್ನಿಸಿತು.

ಅಮೆರಿಕದಂಥ ವಿಶಾಲ ದೇಶದಿಂದ ಡೆನ್ಮಾರ್ಕ್‌ನಂಥ ಚಿಕ್ಕ ದೇಶಕ್ಕೆ ಬಂದದ್ದು ಒಂದು ವಿಧದಲ್ಲಿ ಹಿತವೆನಿಸಿತು; ಡೆನ್ಮಾರ್ಕ್ ಚಿಕ್ಕದಾಗಿದ್ದಾಗ್ಯೂ ಶ್ರೀಮಂತ ದೇಶವಾಗಿತ್ತು. ಇಲ್ಲಿ ಕಾರಿನ ಬದಲು ಸೈಕಲ್ ಹೆಚ್ಚಿದ್ದವು. ನಾನು ಈ ಹಿಂದಿನಂತೆ ಇಲ್ಲಿ ಸೈಕಲ್‌ನಲ್ಲಿ ಹೋಗಲಾರಂಭಿಸಿದೆ. ಅನೇಕ ಜಾಗಗಳಿಗೆ ಕಾಲ್ನಡಿಗೆಯಲ್ಲಿಯೇ ಹೋಗುತ್ತಿದ್ದೆ. ಬಸ್ ಅಥವಾ ರೈಲು ಬೇಕೆಂದರೆ ಅವುಗಳ ಅನುಕೂಲವೂ ಇತ್ತು.

ನಾವು ಪ್ರಸ್ತುತ ಒಂದು ತಾತ್ಕಾಲಿಕ ಮನೆಯಲ್ಲಿದ್ದೆವು. ನೀಲ್‌ಗೆ ನಾಲ್ಕು ವರ್ಷವಾಗಿತ್ತು. ಅವನು ಶಾಲೆಗೆ ಹೋಗಲಾರಂಭಿಸಿದ. ನಾನೂ ಯಾವುದಾದರೂ ನೌಕರಿ ಮಾಡುವ ಬಗ್ಗೆ ಯೋಚಿಸಿದೆ, ವೃತ್ತಿಯಲ್ಲಿ ಅಧ್ಯಾಪಕಿಯಾಗಿದ್ದೆ. ಹೀಗಾಗಿ ನನ್ನ ಹಳೆಯ ಶಾಲೆಗೆ ಫೋನ್ ಮಾಡಿದೆ, ಇಮೇಲ್ ಕಳುಹಿಸಿದೆ, ನೌಕರಿಯ ಬಗ್ಗೆ ವಿಚಾರಿಸಿದೆ, ನಾನು ಈ ಶಾಲೆಯಲ್ಲಿ ಹಿಂದೆ ಅಧ್ಯಾಪಕಿಯಾಗಿ ಸೇವೆಯನ್ನು ಸಲ್ಲಿಸಿದ್ದೆ ಎಂದೂ ಹೇಳಿದೆ. ಈಗ ಯಾವ ಕೆಲಸವೂ ಖಾಲಿಯಿಲ್ಲ ಎಂದು ಅವರು ಉತ್ತರಿಸಿದರು. ನಾನು ಬೇರೆ ಬೇರೆ ಇಂಟರ್‌ನ್ಯಾಷನಲ್ ಸ್ಕೂಲ್‌ಗಳಿಗೆ ಅರ್ಜಿ ಹಾಕಿದೆ. ಆದರೆ ಎಲ್ಲಿಂದಲೂ ಉತ್ತರ ಬರಲಿಲ್ಲ.

ಕೋಪನ್‌ಹೇಗನ್ನಿನ ಎಲ್ಲಾ ಅಂತರರಾಷ್ಟ್ರೀಯ ಸ್ಕೂಲ್‌ಗಳಿಂದ ವಿಷಾದದ ಪತ್ರ ಪಡೆದ ನಂತರ, ಇನ್ನಿತರ ಉದ್ಯೋಗ ಕ್ಷೇತ್ರಗಳಲ್ಲಿ ನೌಕರಿಗಾಗಿ ಹುಡುಕಾಡಿದೆ. ಚೈಲ್ಡ್ ಡೇ ಕೇರ್, ಓಲ್ಡ್ ಏಜ್ ಹೋಮ್, ಸೂಪರ್ ಮಾರ್ಕೆಟ್, ಕೆಫೆ... ಇಲ್ಲಿಯೂ ಪ್ರಯತ್ನಿಸಿದೆ. ನನ್ನ ಸೀವಿ ಸರಿಪಡಿಸಿದೆ, ನನ್ನ ಕವರಿಂಗ್ ಲೆಟರನ್ನು ಕಸ್ಟಮೈಸ್ (ಗ್ರಾಹಕೀಕರಣ) ಮಾಡಿದೆ, ನನ್ನ ಉದ್ಯೋಗದಲ್ಲಿ ಎದುರಾದ ಅಡ್ಡಿಗಳನ್ನು ತಿಳಿಯಪಡಿಸಿದೆ. ನೂರಕ್ಕಿಂತ ಹೆಚ್ಚು ಅರ್ಜಿಗಳನ್ನು ಕಳುಹಿಸಿದೆ. ಎಲ್ಲಾ ಕಡೆಯಿಂದಲೂ ನಿರಾಶಾದಾಯಕ ಉತ್ತರ ಸಿಕ್ಕಿತು ಅಥವಾ ಪ್ರತಿಕ್ರಿಯೆಯೇ ಬರಲಿಲ್ಲ. ನನಗೇಕೆ ನೌಕರಿ ಸಿಗುತ್ತಿಲ್ಲ? ಯಾರೂ ಉತ್ತರವನ್ನೇ ಕೊಡುತ್ತಿಲ್ಲ, ನನ್ನ ಬಗ್ಗೆ ಆಸಕ್ತಿಯನ್ನೇ ತೋರುತ್ತಿಲ್ಲ, ಏಕೆ? ಎಂದು ನನ್ನನ್ನೇ ನಾನು ನಿರಾಸೆಯಿಂದ ಪ್ರಶ್ನಿಸಿಕೊಳ್ಳುತ್ತಿದ್ದೆ.

ಮೊದಲನೆಯದಾಗಿ ಡೆನ್ಮಾರ್ಕ್‌ನಲ್ಲಿ, ಯಾವುದೇ ವಿಧದ ನೌಕರಿಗೆ, ಅದು ಚೈಲ್ಡ್ ಡೇ ಕೇರ್ ಆಗಿರಲಿ ಅಥವಾ ಓಲ್ಡ್ ಏಜ್ ಹೋಮ್ ಆಗಿರಲಿ, ತರಬೇತಿಯ ಅಗತ್ಯವಿದೆ. ನನ್ನ ಬಳಿ ಅಧ್ಯಾಪಕ ವೃತ್ತಿಗೆ ಸಂಬಂಧಿಸಿದ ತರಬೇತಿಯನ್ನು ಹೊರತುಪಡಿಸಿ, ಬೇರಾವ ತರಬೇತಿ ಇರಲಿಲ್ಲ. ಜೀವನದ ಬಿಂದುವೊಂದರಲ್ಲಿ ನಾನು, ಬೇರೇನೂ ಅಲ್ಲದಿದ್ದರೂ, ಸ್ವಿಮಿಂಗ್ ಪೂಲ್‌ವೊಂದರಲ್ಲಿ ನಾನೊಬ್ಬ ಪ್ರಶಿಕ್ಷಕಿ ಅಥವಾ ಲೈಫ್ ಗೈಡ್ ಆಗಬಲ್ಲೆ ಎಂದು ಯೋಚಿಸುತ್ತಿದ್ದೆ. ಆದರೆ ವ್ಯಾಂಕೂವರ್‌ನ ಇಂಗ್ಲೆಂಡ್ ಬೇ ಬೀಚ್‌ನಲ್ಲಿ ಘಟಿಸಿದ ಆ ಭಯಾನಕ ಘಟನೆಯ ನಂತರ, ಈ ವಿಶ್ವಾಸ ಸಹ ಮನಸ್ಸಿನಿಂದ ಅಳಿಸಿಹೋಗಿತ್ತು. ಹೆದರುಪುಕ್ಕಲಿಯಾದ ನಾನು ಬೇರೊಬ್ಬರ ಜೀವವನ್ನು ಉಳಿಸಲು ಸಾಧ್ಯವೇ! ಅಲೆಗಳ ಮಗಳಾದ ನನಗೆ ಈಗ ನೀರನ್ನು ಕಂಡರೆ ಭಯವಾಗುತ್ತಿತ್ತು.

ನೀನು ಸ್ವಚ್ಛತೆಯ ನೌಕರಿಯನ್ನು ಮಾಡಬಲ್ಲೆ, ಆ ಕೆಲಸಕ್ಕೆ ಹೆಚ್ಚು ಡೆನಿಶ್ ಸಹ ಬೇಕಿಲ್ಲ ಎಂದು ಮಾರ್ಕೋ ನನಗೆ ಸಲಹೆಯಿತ್ತ. ನನಗೆ ವಾಸ್ತವವಾಗಿ ನೌಕರಿಯ ಅವಶ್ಯಕತೆಯಿತ್ತು. ನಾನು ಜೀವಮಾನವಿಡೀ ನನ್ನೆಲ್ಲಾ ಖರ್ಚುಗಳಿಗೆ ಮಾರ್ಕೋನನ್ನು ಅವಲಂಬಿಸಲು ಸಾಧ್ಯವಿರಲಿಲ್ಲ. ಆದರೆ ಸ್ವಚ್ಛತೆಯ ಕೆಲಸ...!

‘ನಾನು ಬಾತ್‌ರೂಮ್ ಮತ್ತು ಟಾಯ್ಲೆಟ್ ಸ್ವಚ್ಛ ಮಾಡಬೇಕು, ಕಟ್ಟಡಗಳಿಂದ ಕಸವನ್ನು ತೆಗೆದುಹಾಕುವ ಕೆಲಸವನ್ನು ಮಾಡಬೇಕೆಂದು ನೀವು ಬಯಸುತ್ತೀರ?’ ನಾನು ಆಶ್ಚರ್ಯದಿಂದ ಮಾರ್ಕೋನನ್ನು ಕೇಳಿದೆ.

‘ಇದರಲ್ಲಿ ಕೆಡುಕೇನಿದೆ? ಈ ಕೆಲಸದಲ್ಲಿ ಒಳ್ಳೆಯ ಹಣ ಸಿಗುತ್ತೆ.’

‘ನಾನು ಉಪವಾಸದಿಂದ ಸತ್ತರೂ, ಸ್ವಚ್ಛತೆಯ ಕೆಲಸವನ್ನು ಖಂಡಿತ ಮಾಡುವುದಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಬರುವ ಅನೇಕ ವಿದ್ಯಾವಂತರಿಗೆ ಏನೂ ಸಿಗದಿದ್ದಾಗ, ಅವರು ಸ್ವಚ್ಛತೆಯ ನೌಕರಿಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಆದರೆ ನಾನು ಅಂಥವಳಲ್ಲ. ನನ್ನ ಪತಿ ಸಾಫ್ಟ್‌ವೇರ್